ನಂದ, ಎಡಿಯೂರು
*ಆಘಾತಕ್ಕೂ, ಅಪಘಾತಕ್ಕೂ ವ್ಯತ್ಯಾಸವೇನು?*



ಚಾಲನೆಯಲ್ಲಿರುವ ನೋಟು ನಿಷೇಧಿಸಿದರೆ ಆಘಾತ; ಚಾಲನೆಯಲ್ಲಿ ನೋಟ ನಿಷೇಧಿಸಿದರೆ ಅಪಘಾತ.

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ
*ಹುಟ್ಟುಗುಣ ಸುಟ್ಟರೂ ಹೋಗದು ಎಂದಾಗ ಅದನ್ನು ತಿದ್ದಲು ಹೋಗುವುದೇಕೆ ರಾಮ್‌ಜೀ?*
ಹುಟ್ಟುಗುಣ ಉಪ್ಪಿನಂತಿದ್ದರೆ ಹಠವೆಂಬ ಬೆಂಕಿಯಲ್ಲಿ ನಾಶವಾಗದಿದ್ದರೂ ಪ್ರೀತಿಯೆಂಬ ನೀರಿನಲ್ಲಾದರೂ ಕರಗೀತೆಂಬ ಆಸೆ.

ತಲಕಾಡು ಶ್ರೀನಿಧಿ, ಬೆಂಗಳೂರು
*ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ ಎನ್ನುವುದನ್ನು ಈಗ ಏನೆಂದು ಬದಲಿಸಬೇಕು ಗುರುಗಳೆ?*
ನ ಸ್ತ್ರೀ ಅತ್ಯಾಚಾರಂ ಚ ದುರಾಚಾರಂ ಅರ್ಹತಿ.

ಆರ್. ಮಧುಸೂದನ್, ಹಾಸನ
*ಇಬ್ಬರ ನಡುವೆ ಜಗಳ ತಂದಿಡುತ್ತಿದ್ದ ನಾರದನನ್ನು ಎಲ್ಲ ದೇವತೆಗಳು ಇಷ್ಟ ಪಡುತ್ತಿದ್ದುದು ಏಕೆ?*



ತಂದಿಟ್ಟು ತಮಾಷೆ ನೋಡುವ ನ್ಯೂಸ್ ಚಾನಲ್ ಮೇಲಿನ ಪ್ರೀತಿ ಕಾಲಾತೀತವಾದುದು. ನಾರದ ನ್ಯೂಸ್ ಚಾನಲ್‌ಗಳ ಪಿತಾಮಹ.

ಪಿ.ಜೆ. ರಾಘವೇಂದ್ರ, ಮೈಸೂರು
*ಎನಗಿಂತ ಕಿರಿಯರಿಲ್ಲ ಎಂಬುವರು ಈಗ ಯಾರೂ ಇಲ್ಲವಲ್ಲಾ...?*
‘ಕಿರಿಯರಿಗೆ ಮೀಸಲಾತಿ’ ಎಂದು ಘೋಷಿಸಿ. ಕೂಡಲೆ ದೊಡ್ಡ ಪಡೆಯೇ ಉದ್ಭವಿಸುತ್ತದೆ.

ವಿಜಯಕುಮಾರ್ ಹೆಚ್.ಕೆ. ಶಕ್ತಿನಗರ
*ಹೆಂಡತಿ ತುಂಬಾ ಸುಂದರಿಯಾಗಿದ್ದರೂ ಮನಸ್ಸು ಪರಸ್ತ್ರೀಯ ಕಡೆ ಹೋಗುತ್ತದೆ. ಏಕೆ ಗುರುವೆ?*
ಕಣ್ಣಿಗೆ ಕಂಡ ಸೌಂದರ್ಯವನ್ನೂ ಮೀರಿಸುವಷ್ಟು ಮನಸ್ಸಿನ ಕುರೂಪ ಇರುವುದರಿಂದ.

ಆರ್. ನಾಗರಾಜ್, ಗೊರೂರು
*ಸಾವನ್ನು ಗೆಲ್ಲೋಕೆ ಸಂಜೀವಿನಿ. ಹೃದಯವನ್ನು ಗೆಲ್ಲೋಕೆ?*
ನಿಯಮವೇ ಇಲ್ಲ. ಪ್ರೇಮಪರೀಕ್ಷೆಯೊಂದೇ ಸಿಲಬಸ್ಸೇ ಇಲ್ಲದ ಪರೀಕ್ಷೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಪರೀಕ್ಷೇಲಿ ಫೇಲಾದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೆ ಚುನಾವಣೆಯಲ್ಲಿ ಫೇಲಾದವರು ಆತ್ಮಹತ್ಯೆ ಮಾಡಿಕೊಳ್ತಾರಾ?*
ಸಾಧ್ಯವಿಲ್ಲ. ಆತ್ಮವನ್ನು ಕೊಂದಮೇಲೆಯೇ ರಾಜಕಾರಣಕ್ಕೆ ಎಂಟ್ರಿ ದೊರೆಯುವುದು.

ವಿ. ಹೇಮಂತಕುಮಾರ್, ಬೆಂಗಳೂರು
*ಬಾಳು ಬೆಳದಿಂಗಳಾಗಲು ಏನು ಮಾಡಬೇಕು?*
ಶುಕ್ಲವಾದ ಮಾರ್ಗದಲ್ಲೇ ವೃದ್ಧಿಯಾಗಬೇಕು.

ಮುರಲೀಧರ ಕುಲಕರ್ಣಿ, ಬೀದರ
*ರಿಯೋ ಒಲಿಂಪಿಕ್ಸ್‌ನಲ್ಲಿ ಭಾರತದ ಪರವಾಗಿ ಕೇವಲ ಮಹಿಳೆಯರು ಮಾತ್ರ ಪದಕ ತಂದಿರುವುದರ ರಹಸ್ಯವೇನು?*
ಹೆಣ್ಣಿಗೆ ಚಿನ್ನ, ಬೆಳ್ಳಿಯ ಮೇಲೆ ಮೋಹ ಹೆಚ್ಚು; ಗಂಡಸಿಗೆ ಆ ಮೋಹವಿಲ್ಲ ಎಂಬುದೇ.

ಆರ್.ಎಸ್. ಲಕ್ಷ್ಮೀಕಾಂತ್, ಬೆಂಗಳೂರು
*ಆತ್ಮೀಯರು ಕಾಲವಾದಾಗ ಹಿತೈಷಿಗಳು ‘ದೇವರು ದುಃಖ ಭರಿಸುವ ಶಕ್ತಿ ಕೊಡಲಿ’ ಎನ್ನುವರಲ್ಲ, ದೇವ ನಿಜಕ್ಕೂ ಶಕ್ತಿ ದಯಪಾಲಿಸುವನೆ?*
ಅದಕ್ಕೆ ದೇವನ ಅಗತ್ಯವೇ ಇಲ್ಲ; ಹಸಿವೆ, ಸಾಲ, ಜವಾಬ್ದಾರಿಗಳೇ ದುಃಖದೊಡನೆ ಜೀವಿಸಲು ಶಕ್ತಿ ನೀಡುತ್ತವೆ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಚುನಾವಣೆಯ ಸಮಯದಲ್ಲಿ ವಿನೀತರಂತೆ ಕಾಣುವ ಜನಪ್ರತಿನಿಧಿಗಳು ಚುನಾವಣೆಯ ನಂತರ ಹಾಗೆ ಕಾಣುವುದಿಲ್ಲವೇಕೆ?*
ಸಹಜವೇ. ಮೊಟ್ಟೆ ಮೊಟ್ಟೆಯೇ, ಕೋಳಿ ಕೋಳಿಯೇ. ಚಿಪ್ಪು ಒಡೆದಾಕ್ಷಣ ಮೃದುತ್ವ ನಾಪತ್ತೆ.

## ಬಹುಮಾನಿತ ಪ್ರಶ್ನೆ

ಕೆ.ಯಂ. ವೀರೇಶ್, ಕೂಡ್ಲಿಗಿ
*ಎಲ್ಲರಿಗೂ ಬೇಕಾದುದು ಯಾವುದು?*
ನೆರೆಮನೆಯವರ ವೈಫೈ ಪಾಸ್‌ವರ್ಡ್.

ಡ್ರೈ ವಿಶ್ವನಾಥ್, ಬೆಂಗಳೂರು
*ಕಪ್ಪುಹಣ ಹೇಗಿರುತ್ತದೆ?*
ಕಾಣದಂತೆ, ಭದ್ರವಾಗಿ.

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಹುಟ್ಟುವಾಗ ಇಲ್ಲದ ಭಯ ಸಾಯುವಾಗ ಏಕೆ ಇರುತ್ತದೆ?*
ಏಕೆಂದರೆ ಹುಟ್ಟುವಾಗ ನಮಗೆ ಕಾಣುವುದು ಅಮ್ಮ; ಸಾಯುವಾಗ ಕಾಣುವುದು ಯಮ.

ವಿ. ಹಮೀದ್, ವಿಟ್ಲ
*ಮೊದಲ ಪತ್ನಿ ಚೆಕ್ಕು; ಎರಡನೆಯ ಪತ್ನಿ ಡ್ರಾಫ್ಟು. ಮೂರನೆಯ ಪತ್ನಿ?*
ಮೊದಲ ಎರಡನ್ನೂ ಬೌನ್ಸ್ ಮಾಡಿದ ಆರೋಪದ ಮೇಲೆ ಬರುವ ಅರೆಸ್ಟ್ ವಾರಂಟು.

ಸುಶೀಲಾ ರಾಮಣ್ಣ, ಬೆಂಗಳೂರು
*ವಾಟ್ಸ್ ಆಪ್ ಬಂದಮೇಲೆ ನೆಂಟರಿಷ್ಟರ*



*ನಡುವಿನ ಬಾಂಧವ್ಯ ಹೆಚ್ಚಾಯಿತಂತೆ. ಹೌದೆ?*
ಫೋಟೋ ಶೇರಿಂಗ್ ಹೆಚ್ಚಿ, ಸುಳ್ಳು ಸುಳ್ಳೇ ಲೈಕ್, ಕಾಮೆಂಟ್‌ಗಳ ನಾಟಕಗಳು

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ
*ರಂಗನಾಟಕಕ್ಕೂ, ಜೀವನನಾಟಕಕ್ಕೂ ಏನು ವ್ಯತ್ಯಾಸ?*
ರಂಗನಾಟಕದಲ್ಲಿ ಮೊದಲು ಟಿಕೆಟ್, ನಂತರ ನಾಟಕ; ಜೀವನನಾಟಕದಲ್ಲಿ ಮೊದಲು ನಾಟಕ, ಕಡೆಯಲ್ಲಿ ಟಿಕೆಟ್!

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಬೆಂಗಳೂರು
*ಮನುಷ್ಯ ತನಗೆ ಅರಿವಿಲ್ಲದೆಯೇ ಮಾಡುವ ಒಳ್ಳೆಯ ಕೆಲಸ ಯಾವುದು?*
ಗೊರಕೆ ಇಲ್ಲದೆ ನಿದ್ರಿಸುವುದು.

■ ರಾಮ್